
# ಬಯಕೆ ತೋಟದ ಬೇಲಿಯೊಳಗೆ ಹೊಸ ಹೂವು!



ಅವರು ತಮ್ಮ ತಾಯಿಯನ್ನು ಅಪ್ಪಿಕೊಳ್ಳುತ್ತಾ ಬಿಂಕದಿಂದ ಹೇಳಿದರು, 'ಇದು ನನಗೆ ನನ್ನ ಮಮ್ಮಿಯ ಕ್ರಿಸ್‌ಮಸ್ ಗಿಫ್ಟ್.'

'ಮಮ್ಮಿ ಕೊಂಡಿದ್ದೆ?' ನಾನು ಕೇಳಿದೆ.

'ಮಮ್ಮಿ ಎಲ್ಲಿ ಕೊಳ್ಳುತ್ತಾರೆ? ಅವರು ಹಣವನ್ನಷ್ಟೇ ಕೊಡುತ್ತಾರೆ. ನಾನೇ ಅವರ ಪರವಾಗಿ ನನಗೆ ಗಿಫ್ಟ್ ಕೊಳ್ತೀನಿ.'

ಓಹ್, ನಿಜ ಹೇಳಬೇಕೆಂದರೆ, ಏನೆಲ್ಲಾ ಕಳೆದುಹೋಗುತ್ತದೆ, ಜೀವನ ಅದೆಷ್ಟು ಕೃತಘ್ನ, ಅದು ಯಾವಾಗ ತಿರಸ್ಕರಿಸುವುದೋ...

ಇಂದು ಗ್ರೇಥಾ ಇರಲಿಲ್ಲ, ಲಾರಾ ಸಹ ಇರಲಿಲ್ಲ. ಆದರೆ ಆ ಬ್ಲೇಜರ್ ನನ್ನ ಕೈಯಲ್ಲಿತ್ತು. ನಾನು ಅದನ್ನು ಧರಿಸಿದೆ, ಅದು ನನಗೆ ಫಿಟ್ ಆಗಿತ್ತು. ನನ್ನ ಮತ್ತು ಲಾರಾರ ಶಾರೀರಿಕ ನಿಲುವು ಸಮಾನವಾಗಿತ್ತು.

'ನೀನು ಡಾಗ್ ಲವರ್...' ಲಾರಾರ ಮಾತು ನೆನಪಾಯಿತು. ನಾನು ಅಬ್ಬಿಯನ್ನು ಮೈದಡವುತ್ತಾ ಅದರೊಂದಿಗೆ ಮಾತನಾಡುತ್ತಿದ್ದೆ. ಲಾರಾ ನಗರದಿಂದ ಹೊರ ಹೋಗುವ ಸಂದರ್ಭ ಬಂದಾಗ ನಾನು ಅದೆಷ್ಟೋ ಬಾರಿ ಅಬ್ಬಿಯನ್ನು ನೋಡಿಕೊಂಡಿದ್ದೆ.

ಕೊನೆಯಲ್ಲಿ ಫಿಲಿಪ್ ಅಬ್ಬಿಯನ್ನು ನನ್ನೆಡೆಗೆ ಚಾಚಿದರು, ನಾನು ಅದನ್ನು ಎತ್ತಿಕೊಂಡು ಮುದ್ದಾಡಿದೆ.

***

ದುರ್ಘಟನೆಯ ನಂತರ ಮತ್ತೆ ದುರ್ಘಟನೆಗಳು ಸಂಭವಿಸುತ್ತಿದ್ದವು... ನನ್ನ ಜೀವನದ ನದಿ ಹಾದಿ ತಪ್ಪಿದ ಅನೇಕ ಧಾರೆಗಳಲ್ಲಿ ಪರಿವರ್ತನೆಯಾಗಿತ್ತು. ಒಳ್ಳೆಯ ಕಾಲ ನಮಗೆ ಖುಷಿಯನ್ನು ಕೊಡುತ್ತದೆ, ಕೆಟ್ಟ ಕಾಲ ನಮ್ಮನ್ನು ಬಲಶಾಲಿಯನ್ನಾಗಿಸುತ್ತದೆ. ನಾವು ನಮ್ಮ ಜೀವನದ ಎಲ್ಲಾ ಘಟನೆಗಳ ಬಗ್ಗೆ ನಿಯಂತ್ರಣವನ್ನು ಸಾಧಿಸಲು ಸಾಧ್ಯವಾಗದು, ಆದರೆ ಅವುಗಳಿಂದ ಪಾರಾಗಲು ಸಕಾರಾತ್ಮಕವಾಗಿ ಯೋಚಿಸುವ ಕ್ರಮವನ್ನು ಅನುಸರಿಸಬಲ್ಲೆವು. ಆಗ ಜೀವನದ ಯಾವುದೇ ಘಟನೆ ಕಸಿದುಕೊಳ್ಳುವುದಕ್ಕಷ್ಟೇ ಸೀಮಿತವಾಗದೆ, ಏನನ್ನಾದರೂ ಕೊಟ್ಟೂ ಹೋಗುತ್ತದೆ. ನನ್ನ ಅದೃಷ್ಟದಿಂದ ಶಾಲೆಯ ನೌಕರಿ ಇನ್ನು ಇತ್ತು. ಲಾರ್ಸ್‌ನೊಂದಿಗೆ ಅಷ್ಟು ವರ್ಷಗಳ ಕಾಲ ಹೆಂಡತಿಯಾಗಿದ್ದರಿಂದ, ಡೆನ್ಮಾರ್ಕ್‌ನ ಪರ್ಮನೆಂಟ್ ರೆಸಿಡೆಂಟ್ ಪರ್ಮಿಟ್ ನನಗೆ ಲಭಿಸಿತ್ತು.